ಕೆ. ಗೋವಿಂದಾಚಾರಿ, ಮೈಸೂರು
ಹೆಣ್ಣುಮಕ್ಕಳಿಗೆ ವಿವಿಧ ರೀತಿಯ ಉಡುಪುಗಳಿದ್ದರೂ ಟೀಶರ್ಟ್, ಜೀನ್ಸ್ ಪ್ಯಾಂಟನ್ನೇ ಹೆಚ್ಚು ಧರಿಸುವುದೇಕೆ?



ಮಾಟ, ನೋಟ, ಓಟ ಮೂರಕ್ಕೂ ಸೂಕ್ತವಾದ್ದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಜಗತ್ತಿನಲ್ಲಿ ಅತಿ ಕಹಿಯಾದ ವಸ್ತು ಯಾವುದು ಸಾರ್?
ವಿಶ್ವಾಸದ್ರೋಹ.

ಕೆ.ಎಂ. ವೀರೇಶ್, ಕೂಡ್ಲಿಗಿ
ಈ ಜಗದಲ್ಲಿ ನಮ್ಮನ್ನು ಅತಿ ಮೂರ್ಖರನ್ನಾಗಿ ಮಾಡುವವರು ಯಾರು?
ಕನ್ನಡಿ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಗರ್ಭಗುಡಿಗೂ, ಗರ್ಭಕೋಶಕ್ಕೂ ಏನು ವ್ಯತ್ಯಾಸ?
ಅದು ಪುಣ್ಯಸ್ಥಳ, ಇದು ಪಾಪ ಸ್ಥಳ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಸಿ ಬೆಳೆಸಿದರೆ ಗಿಡವಾಗಿ ಹಣ್ಣು ಕೊಡುತ್ತದೆ. ಮಗುವನ್ನು ಬೆಳೆಸಿದರೆ?



ದೃಢವಾಗಿ ಹೆಗಲು ಕೊಡುತ್ತದೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ತಾಯಿ ಇಲ್ಲದ ತವರಿಗೂ, ನಾಯಕರಿಲ್ಲದ ಪಕ್ಷಕ್ಕೂ ಏನು ವ್ಯತ್ಯಾಸ?
ಅದು ಬೆಳಕಿಲ್ಲದ ಕಣ್ಣು; ಇದು ಸ್ವಯಂವರದ ಹೆಣ್ಣು.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ
ಕನ್ನಡಶಾಲಾ ಮಕ್ಕಳಿಗೆ ಪೋಷಕರು ಮನೆಯಲ್ಲೇ ರಾತ್ರಿ ಇಂಗ್ಲಿಷ್ ಹೇಳಿಕೊಟ್ಟರೆ ಆಂಗ್ಲಶಾಲೆ ಅವಶ್ಯವಿಲ್ಲ ಅಲ್ಲವೆ?
ಊಹೂಂ. ಹಿತ್ತಲ ಗಿಡ ಮದ್ದಲ್ಲ, ಮೊದ್ದು.

ಎನ್. ಗೋಪಾಲರಾವ್, ಬೆಂಗಳೂರು
ರಾಜ್ಯದ ಇತರೆಡೆಯಿರುವ ಮಠಗಳ ಶ್ರೀಗಳು ಚಾತುರ್ಮಾಸ ಆಚರಣೆಗೆ ಬೆಂಗಳೂರನ್ನೇ ಆಯ್ಕೆ ಮಾಡಲು ಕಾರಣ?
ಅವರ ಬೇಳೆ ಬೇಯುವುದು, ಅವರ ಮಾತಿಗೆ ಸೊಪ್ಪು ಹಾಕುವವರು ಇಲ್ಲೇ ಹೆಚ್ಚಂತೆ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
ಮೊದಲು ಪಾರ್ಕಿಂಗ್ ಕಂಡುಹಿಡಿದವರು ಯಾರು?
ಜನಕ. ಸೀತಾಸ್ವಯಂವರಕ್ಕೆ ಬಂದವರ ರಥ ನಿಲುಗಡೆಯ ಸ್ಥಳವೇ ಮೊದಲ ಪಾರ್ಕಿಂಗ್ ಲಾಟ್.

ರತ್ನಾ ರಾಜ್‌ಕುಮಾರ್, ಹಾಸನ
ತಾನು ಕಳ್ಳ, ಪರರನ್ನು ನಂಬ ಎನ್ನುವವರ ಸಹವಾಸ ಮಾಡಿದರೆ?
ಜೀವವಿಮೆ, ವಸ್ತುವಿಮೆಗಳ ಬಗ್ಗೆ ಜಾಗೃತಿ ಹೆಚ್ಚುತ್ತದೆ.

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
ಹೃದಯಗೀತೆಗೂ, ಮೌನಗೀತೆಗೂ ಇರುವ ವ್ಯತ್ಯಾಸವೇನು ಶಿವಾ?
ಹೃದಯಗೀತೆಯನ್ನು ಮ್ಯೂಟ್ ಮಾಡಿದರೆ ಮೌನಗೀತೆ.

ಬಿ. ಚಂದ್ರೇಗೌಡ, ಬೆಂಗಳೂರು
ಹೆರಿಗೆ ನೋವಿಗೂ, ತೆರಿಗೆ ನೋವಿಗೂ ಏನು ವ್ಯತ್ಯಾಸ?
ಇದು ಶಿಶುನಾಳಗೀತೆ; ಅದು ಶಂಖದ ಸ್ತೋತ್ರ.

ಪಿ. ಜಯವಂತ ಪೈ, ಕುಂದಾಪುರ
ಮದುವೆಯ ದಿನವೇ ವರ ನಾಪತ್ತೆಯಾದನಂತಲ್ಲ...?
ಬಾರಾತ್‌ಗೆ ರೇಸ್ ಕುದುರೆ ತಂದಿದ್ದು ಕನ್ಯಾಪಿತೃವಿನದೇ ತಪ್ಪಂತೆ.

ಡಿ.ಎಲ್. ಚಂದ್ರಿಕಾ, ಬಳ್ಳಾರಿ
ಜಾತಿಭೇದಕ್ಕೂ, ವರ್ಣಭೇದಕ್ಕೂ ವ್ಯತ್ಯಾಸವೇನು?
ಜಾತಿಭೇದ ಬಯಾಲಜಿಗೆ ಅಗತ್ಯ; ವರ್ಣಭೇದ ಚಿತ್ರಕಲೆಗೆ ಅಗತ್ಯ.

## ಬಹುಮಾನಿತ ಪ್ರಶ್ನೆ

ಎಚ್. ಆನಂದ್‌ಕುಮಾರ್, ಚಿತ್ರದುರ್ಗ
ಸುಳ್ಳನ್ನೇ ಉಂಡು, ಸುಳ್ಳನ್ನೇ ಜೀರ್ಣಿಸಿಕೊಂಡು, ಸುಳ್ಳು ಹೇಳುತ್ತಲೇ ತಿರುಗುವ ಮುಖಂಡರನ್ನು ಕಂಡರೆ ನಿಮಗೇನೆನಿಸತ್ತೆ?
ಕ್ಷಮಿಸಿ. ಈ ಅಂಕಣದಲ್ಲಿ ಸಭ್ಯತೆ ಮೀರಿದ ಭಾಷೆ ಬಳಸುವಂತಿಲ್ಲ.

ಡಿ.ಎಸ್. ಪಂಕಜಸುಬ್ರಹ್ಮಣ್ಯ, ಬೆಂಗಳೂರು
ಅಪ್ಪಂದಿರು ರಾಜಕೀಯದಲ್ಲಿದ್ದರೆ ಮಕ್ಕಳೇಕೆ ಇಷ್ಟು ಮೆರೆಯುತ್ತಾರೆ?
ನಾಯಿ ಸುಪುಷ್ಟವಾದಷ್ಟೂ ಬಾಲ ಬಿರುಸಾಗಿ ಆಡುವುದು ಮೃಗನಿಯಮ.

ವಿ. ಹೇಮಂತಕುಮಾರ್, ಬೆಂಗಳೂರು
ವಾಸ್ತು ಪ್ರಕಾರ ಅಡುಗೆಮನೆ ಯಾವ ದಿಕ್ಕಿನಲ್ಲಿದ್ದರೆ ಅಡುಗೆ ರುಚಿಯಾಗಿರುತ್ತೆ?
ಉಪ್ಪು, ಹುಳಿ, ಖಾರದ ಹಿತ, ಮಿತ ತಿಳಿಯುವ ದಿಕ್ಕಿನಲ್ಲಿ.

ರವಿ ಪೈ, ಕಾಸರಕೋಡ
ಇಂದಿನ ಮಕ್ಕಳಿಗೆ ಮೈದಾನದ ಆಟಕ್ಕಿಂತ ಮೊಬೈಲ್ ಆಟವೇ ಬಹಳ ಇಷ್ಟ. ಏಕೆ?



ಶಿಶುವಿನ ಪ್ರಥಮ ಬೆಳವಣಿಗೆ ಅನುಕರಣೆಯಿಂದ. ಯಥಾ ಪೋಷಕಮ ತಥಾ ಬಾಲಕ.

ಆರ್. ಮಧುಸೂದನ್, ಹಾಸನ
ದ್ರೋಣರಂಥ ಶ್ರೇಷ್ಠರು ಅಧರ್ಮದಿಂದ ಅಭಿಮನ್ಯುವಿನ ಸಾವಿಗೆ ಕಾರಣರಾಗಿದ್ದು ಗುರುಪರಂಪರೆಗೇ ಅಪಚಾರವಲ್ಲವೆ?
ಅವರು ಗುರುಶ್ರೇಷ್ಠರಷ್ಟೆ, ನರಶ್ರೇಷ್ಠರಲ್ಲ. ಹಂಗಿನರಮನೆಯಲ್ಲಿ ಹೃದಯಕ್ಕೆ ಸ್ಥಳವಿಲ್ಲ.

ಎಚ್. ಆನಂದಕುಮಾರ್, ಚಿತ್ರದುರ್ಗ
ಹರಿದ ಪ್ಯಾಂಟನ್ನು ಮುಂಚೆ ಪೋಸ್ಟಾಫೀಸ್ ಅಂತಿದ್ರು. ಈಗಿನ ಪ್ಯಾಂಟ್‌ಗಳಲ್ಲಿ ಎಷ್ಟು ಪೋಸ್ಟಾಫೀಸ್‌ಗಳು?
ಪೋಸ್ಟ್‌ಗೊಂದು, ಪಾರ್ಸಲ್ಗೊಂದು, ಸ್ಪೀಡ್ಪೋಸ್ಟ್‌ಗೊಂದು, ಏರ್ಮೇಯ್ಲ್‌ಗೊಂದು...

ಪ್ರಶ್ನೆಗಳನ್ನು ಕಳುಹಿಸಿ
editorsu@sudha.co.in

■ ರಾಮ್